

ನಟ ಶಾರುಖ್ ಖಾನ್ ಫಾರ್ಮ್ ಬೇನಾಮಿ ಎಂದ ಐಟಿ ಇಲಾಖೆ ▸ 10

ಭಾರತ ನಿರಾಶ್ರಿತರ ರಾಜಧಾನಿ ಆಗುವುದು ಬೇಡ: ಮೆಹ್ತಾ ▸ 9

ನೌಕಾಪಡೆಗೆ ಜಲಾಂತರ್ಗಾಮಿ ಕಾರಂಜ್ ಬಲ 9 ◂

11 ◂ ಇಂದಿನಿಂದ ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ಸರಣಿ




ಮಂಗಳೂರು
ಗುರುವಾರ
1 ಫೆಬ್ರವರಿ 2018
ಹೇಮಲಂಬಿ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಆಶ್ಲೇಷ
ಬೆಲೆ ₹ 5.00

# ಹೊಸ ದಿಗಂತ HD

ಸಂಪುಟ 39, ಸಂಚಿಕೆ 306, ಪುಟಗಳು 12+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2018-20 Posted at kodiali


### ಸರಕಾರಿ ಉದ್ಯೋಗದ ನಿರೀಕ್ಷೆಯಲ್ಲಿ ದೇಹದಾರ್ಢ್ಯಪಟು ಜಗದೀಶ್ ಪೂಜಾರಿ

## ಕಾಲಿಗೆ ಬಲವಿಲ್ಲದಿದ್ದರೂ ಸಾಧನೆಯ ಮೆಟ್ಟಿಲೇರಿದ ಗಟ್ಟಿಗ

▸ ಸುರೇಶ್ ಡಿ. ಪಳ್ಳಿ

**ಮಂಗಳೂರು:** ಆತ್ಮವಿಶ್ವಾಸ, ಸಾಧಿಸುವ ಛಲವೊಂದಿದ್ದರೆ ಸಾಧನೆಗೆ ಯಾವುದೂ ಅಡ್ಡಿಯಲ್ಲ ಎಂಬುದಕ್ಕೆ ಹಲವು ನಿದರ್ಶನಗಳು ನಮ್ಮ ಮುಂದಿವೆ.

ಇಲ್ಲೊಬ್ಬ ಯುವಕನಿದ್ದಾನೆ. ಎಳವೆಯಲ್ಲೇ ಕಾಲಿನ ಶಕ್ತಿ ಕಳಕೊಂಡಿದ್ದರೂ ನಿರಂತರ ಶ್ರಮದ ಮೂಲಕ ದೇಹದಾರ್ಢ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಸೈ ಎನಿಸಿಕೊಂಡಿದ್ದಾರೆ.

ಹೆಸರು ಜಗದೀಶ್ ಪೂಜಾರಿ. ಮಂಗಳೂರು ಸಮೀಪದ ಅಡ್ಯಾರುಪದವಿನ ಯಮುನಾ ಮತ್ತು ಲಿಂಗಪ್ಪ ಪೂಜಾರಿ ದಂಪತಿಯ ಪುತ್ರ. ಮಂಗಳೂರಿನ ಫಿಟ್‌ನೆಸ್ ಜಿಮ್‌ನಲ್ಲಿ ಸಂದೀಪ್ ಮತ್ತು ಅಜಯ್ ಇವರಿಂದ ತರಬೇತಿ ಪಡೆದು ಪ್ರಸ್ತುತ ನಗರದ ಹೊರವಲಯದ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಬಾಡಿ ಬಿಲ್ಡಿಂಗ್ ತರಬೇತುದಾರರಾಗಿದ್ದಾರೆ.

ವಿಶೇಷ ಚೇತನರಿಗಾಗಿ ನಡೆದ ಬಹುತೇಕ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನಿಯಾಗಿ ಹೊರಹೊಮ್ಮಿದ ಕೀರ್ತಿ ಜಗದೀಶರದ್ದು. ಮಿಸ್ಟರ್ ಇಂಡಿಯಾ ಪ್ರಶಸ್ತಿಯೂ ಇವರ ಮುಡಿಗೇರಿದೆ. ಇಷ್ಟು ಮಾತ್ರವಲ್ಲದೆ ಮಿಸ್ಟರ್ ಸೌತ್ ಇಂಡಿಯಾ, ಮಿಸ್ಟರ್ ಕರಾವಳಿ, ಮಿಸ್ಟರ್ ಕರ್ನಾಟಕ, ಮಿಸ್ಟರ್ ದಕ್ಷಿಣ ಕನ್ನಡ, ಮಿಸ್ಟರ್ ಕಾಸರಗೋಡು ಸೇರಿದಂತೆ ಹಲವು ಪ್ರಶಸ್ತಿಗಳು ಇವರ ಸಾಧನೆಗೆ ಸಂದಿವೆ. 40ಕ್ಕೂ ಅಧಿಕ ಪದಕಗಳನ್ನು ತನ್ನದಾಗಿಸಿಕೊಂಡಿರುವ ಜಗದೀಶ್ ವಿವಿಧ ಸಂಘಟನೆಗಳು, ಸ್ವಾಮೀಜಿಗಳು ಹಾಗೂ ಗಣ್ಯರಿಂದ 61ಕ್ಕೂ ಅಧಿಕ ಬಾರಿ ಸನ್ಮಾನ ಗೌರವಗಳಿಗೆ ಪಾತ್ರರಾಗಿದ್ದಾರೆ.



### ಸರಕಾರಿ ಉದ್ಯೋಗದ ನಿರೀಕ್ಷೆಯಲ್ಲಿ

ಹಣಕಾಸಿನ ತೊಡಕಿನಿಂದಾಗಿ ಅನೇಕ ಬಾರಿ ಅಂತಾರಾಷ್ಟ್ರೀಯ ಮಟ್ಟದ ಬಾಡಿ ಬಿಲ್ಡಿಂಗ್ ಸ್ಪರ್ಧೆಯಿಂದ ಹೊರಗುಳಿಯುವಂತಾಗಿತ್ತು ಎಂಬುದು ಜಗದೀಶ್ ಅವರ ಕೊರಗು. ಕಾಲಿಗೆ ಬಲ ಇಲ್ಲ ಎಂಬ ಕೊರಗು ನನ್ನಲ್ಲಿಲ್ಲ, ಪ್ರೋತ್ಸಾಹ ಬೇಕು. ಸರಕಾರ ತನ್ನನ್ನು ಗುರುತಿಸಿ ಪ್ರೋತ್ಸಾಹಿಸಿದರೆ ಇನ್ನಷ್ಟು ಸಾಧನೆ ಮಾಡಬಲ್ಲೆ. ಸಣ್ಣದೊಂದು ಸರಕಾರಿ ಉದ್ಯೋಗಕ್ಕಾಗಿ ಹಲವು ಬಾರಿ ಪ್ರಯತ್ನಿಸಿದರೂ ಸರಕಾರ ಮಾತ್ರ ತನ್ನತ್ತ ಕಣ್ಣೆತ್ತಿ ನೋಡಿಲ್ಲ ಎಂದು ಬೇಸರ ವ್ಯಕ್ತಪಡಿಸುವ ಜಗದೀಶ್ ಮುಂದೆಯಾದರೂ ಸರಕಾರ ಗುರುತಿಸಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ.

### ಕಾಲಿನ ಕೊರಗಿಲ್ಲ..

**ಒಂದು ಕಾಲಿಗೆ ಬಲ ಇಲ್ಲ ಎಂಬ ಕೊರಗು ನನ್ನಲ್ಲಿಲ್ಲ, ಸಮಾಜದಿಂದ ಪ್ರೋತ್ಸಾಹ ಬೇಕು. ಸರಕಾರ ತನ್ನನ್ನು ಗುರುತಿಸಿ, ಸಣ್ಣದೊಂದು ಉದ್ಯೋಗವನ್ನಿತ್ತು ಪ್ರೋತ್ಸಾಹಿಸಿದರೆ ಇನ್ನಷ್ಟು ಸಾಧನೆ ಮಾಡಬಲ್ಲೆ**

■ ಜಗದೀಶ್ ಪೂಜಾರಿ

ದೊಡ್ಡ ಮಟ್ಟದಲ್ಲಿ ಪ್ರೋತ್ಸಾಹ ದೊರೆಯದಿದ್ದರೂ ಸ್ಥಳೀಯ ಕೆಲವು ಸಂಘಟನೆಗಳು ಇವರಿಗೆ ನೆರವು ನೀಡಿವೆ. ಬಿರುವ ಕುಡ್ಲ ಲಾಲ್‌ಬಾಗ್ ಘಟಕ, ಬಿರುವ ಪುತ್ತೂರು ಘಟಕ ಹಾಗೂ ಮುಂಬೈ ಘಟಕ ಇವರ ನೆರವಿಗೆ ನಿಂತಿದ್ದರಿಂದ ಒಂದಷ್ಟು ಸಾಧನೆ ಮಾಡುವಂತಾಗಿದೆ ಎಂದವರು ಸ್ಮರಿಸಿಕೊಳ್ಳುತ್ತಾರೆ.

ಸದಾ ಪ್ರೋತ್ಸಾಹ ನೀಡುವ ಸಹ್ಯಾದ್ರಿ ಕಾಲೇಜಿನ ಮುಖ್ಯಸ್ಥ ಡಾ.ಮಂಜುನಾಥ ಭಂಡಾರಿಯವರನ್ನು ಕೂಡ ಜಗದೀಶ್ ನೆನಪಿಸಿಕೊಳ್ಳುತ್ತಾರೆ. ಹಲವು ಬಾರಿ ಸ್ಪರ್ಧೆಗಳಿಗೆ ಹೋಗುವಾಗ ಹಣಕಾಸಿನ ನೆರವಿನೊಂದಿಗೆ ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ.



ಇಂತಹ ಮನಸ್ಸುಗಳು ನಮ್ಮಂಥ ಸಾಧಕರಿಗೆ ಬೇಕಿದೆ ಎನ್ನುತ್ತಾರೆ ಜಗದೀಶ್.

ಐಟಿಐ ಶಿಕ್ಷಣ ಪೂರೈಸಿದ ಬಳಿಕ ದೇಹದಾರ್ಢ್ಯ ಸ್ಪರ್ಧೆಯತ್ತಲೇ ವಿಶೇಷ ಗಮಹರಿಸಿದ ಜಗದೀಶ್ ಈ ಕ್ಷೇತ್ರದಲ್ಲಿ ಮಿಂಚಿದವರು. ಮನೆಯ ಬಡತನದಿಂದಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪಾಲ್ಗೊಳ್ಳಲು ಅಸಾಧ್ಯವಾಯಿತು ಎನ್ನುವ ಜಗದೀಶ್‌ಗೆ ಸರಕಾರ ತನ್ನನ್ನು ಗುರುತಿಸಬಹುದು ಎಂಬ ನಿರೀಕ್ಷೆಯಲಿದ್ದಾರೆ.


ಹೆಚ್ಚುವ